2. ಅಕ್ಟೋಬರ್ ಮಾಹೆಯಲ್ಲಿ ನಡೆಯಲಿರುವ 300ನೇ ವರ್ಷದ ಗುರ್ತಾ ಗದ್ದಿ ಕಾರ್ಯಕ್ರಮಕ್ಕೆ ಆಗಮಿಸಲಿರುವ ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸಲು ರೂ.1500 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಊ) ಬೀದರ್ ನಗರವನ್ನು ಪ್ರವಾಸಿ ತಾಣವನ್ನಾಗಿ ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆಯೇ?

ಪ್ರಸ್ತಾವನೆಗಳು ಬಂದಿದ್ದು ಅಭಿವೃದ್ಧಿ ಕಾರ್ಯಗಳನ್ನು ಹಂತಹಂತವಾಗಿ ಕೈಗೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (457)224
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)
ಉತ್ತರಿಸುವವರು : (ಶ್ರೀ ಬಿ.ಎಸ್.ಯಡಿಯೂರಪ್ಪ) ಮಾನ್ಯ ಮುಖ್ಯ ಮಂತ್ರಿಗಳು

ಅ) ರಾಮನಗರ ಜಿಲ್ಲೆಯ ರಾಮನಗರ ಪ್ರಾದೇಶಿಕ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಬರುವ ಹುಲ್ತಾರ್ ಸ್ಟೇಟ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಎಷ್ಟು ಕ್ರಶರ್‌ಗಳು ಅರಣ್ಯ ಇಲಾಖೆಯ ಅನುಮತಿ ಪಡೆದು ಕಾರ್ಯನಿರ್ವಹಿಸುತ್ತಿವೆ;

ರಾಮನಗರ ಪ್ರಾದೇಶಿಕ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಬರುವ ಹುಲ್ತಾರ್‌ನ ಎ ಮತ್ತು ಬಿ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ನ್ಯಾಯಾಲಯದ ಆದೇಶದನ್ವಯ 8 ಜಿಲ್ಲೆ ಕ್ರಶರ್‌ಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಿಗೆ ಅರಣ್ಯ ಇಲಾಖೆಯ ಪರವಾನಿಗೆ ದೊರೆತಿಲ್ಲ.

ಆ) ಎಷ್ಟು ಕ್ರಶರ್‌ಗಳು ಇಲಾಖೆಯ ಪರವಾನಗಿ ಮತ್ತು ಅನುಮತಿ ಇಲ್ಲದೇ ಕಾರ್ಯನಿರ್ವಹಿಸುತ್ತಿವೆ; (ವಿವರ ಒದಗಿಸುವುದು)

8 ಕ್ರಶರ್‌ಗಳು ಕೋರ್ಟ್‌ನ ಆದೇಶದನ್ವಯ ಕೆಲಸ ಮಾಡುತ್ತಿದೆ. ಆದರೆ, ಇವುಗಳಿಗೆ ಅರಣ್ಯ ಇಲಾಖೆಯಿಂದ ಪರವಾನಗಿಯನ್ನು ನೀಡಿರುವುದಿಲ್ಲ.

ಇ) ಈ ವಲಯದಲ್ಲಿ ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಕ್ರಶರ್‌ಗಳಿಗೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಷ್ಟು ಜನ ವಲಯಾರಣ್ಯ ಅಧಿಕಾರಿಗಳ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿ ಇಡಲಾಗಿತ್ತು; ಇವರ ಹೆಸರು ವಿವರಗಳೇನು; (ಪ್ರಕರಣದ ಪೂರ್ಣ ವಿವರಗಳು ಹಾಗೂ ಇದರಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿವರಗಳನ್ನು ಒದಗಿಸುವುದು)

ರಾಮನಗರ ವಲಯ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶಗಳಲ್ಲಿ ಕ್ರಶರ್‌ಗಳನ್ನು ಉಪಯೋಗಿಸಿ ಅಕ್ರಮವಾಗಿ ಕಲ್ಲುಗಳನ್ನು ತೆಗೆಯುವುದನ್ನು ತಡೆಗಟ್ಟಲು ವಿಫಲರಾದ ಆಪಾದನೆ ಮೇಲೆ ಶ್ರೀ ಡಿ.ದೇವರಾಜು, ಅಂದಿನ ವಲಯ ಅರಣ್ಯಾಧಿಕಾರಿ,

ರಾಮನಗರ ಇವರನ್ನು ದಿನಾಂಕ 26.05.2006ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಈ) ಈ ಪ್ರಕರಣ ಈಗ ಯಾವ ಹಂತದಲ್ಲಿದೆ; ಈ ಪ್ರಕರಣದಲ್ಲಿ ಶಾಮೀಲಾಗಿರುವ ಎಷ್ಟು ಜನ ಅಧಿಕಾರಿಗಳಿಗೆ ಶಿಕ್ಷೆ ನೀಡಲಾಗಿದೆ; ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಅಮಾನತ್ತಿಗೆ ಒಳಗಾಗಿದ್ದ ಎಷ್ಟು ಜನರಿಗೆ ಯಾವ ಹುದ್ದೆಗೆ ಬಡ್ತಿ ನೀಡಲಾಗಿದೆ (ಹೆಸರು ವಿವರಗಳು ಒದಗಿಸುವುದು);

ಈ ಪ್ರಕರಣದಲ್ಲಿ ಶ್ರೀ ಡಿ.ದೇವರಾಜ ಇವರು ಅರಣ್ಯ ಪ್ರದೇಶದಲ್ಲಿ ನಡೆಸುತ್ತಿದ್ದ ಗಣಿಗಾರಿಕೆ ಬಗ್ಗೆ ಮೊಕದ್ದಮೆ ದಾಖಲೆ ಮಾಡಿ ನ್ಯಾಯಾಲಯಕ್ಕೆ ವರದಿ ಮಾಡಿದ್ದಾರೆ. ಇವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವವರಿಗೆ ಪ್ರೋತ್ಸಾಹ ನೀಡಿಲ್ಲದಿರುವುದು ತನಿಖಾ ವರದಿಯಲ್ಲಿ ವ್ಯಕ್ತವಾದ ಕಾರಣ ಇವರ ವಿರುದ್ಧ ಉದ್ದೇಶಿಸಲಾಗಿದ್ದ ಶಿಸ್ತು ಕ್ರಮವನ್ನು ದಿನಾಂಕ 22.01.2007ರ ಆದೇಶದಲ್ಲಿ ಕೈಬಿಡಲಾಗಿದೆ.

ಉ) ಮೇಲ್ಕಂಡ ಗುರುತರವಾದ ವಿಚಾರಣೆ ಎದುರಿಸುತ್ತಿರುವ ಅಧಿಕಾರಿಗಳಿಗೆ ಶಿಕ್ಷೆಗೆ ಬದಲು ಬಡ್ತಿ ನೀಡಿರುವುದು ಸರಿಯೇ; ಹಾಗಿದ್ದಲ್ಲಿ ಸರ್ಕಾರ ಈ ವಿಷಯವನ್ನು ಪುನರ್ ಪರಿಶೀಲನೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳುವುದು;

ಶ್ರೀ ಡಿ.ದೇವರಾಜು ವಲಯ ಅರಣ್ಯಾಧಿಕಾರಿ ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅವರನ್ನು ಬಡ್ತಿಗಾಗಿ ಪರಿಶೀಲಿಸುವ ಸಮಯದಲ್ಲಿ ಇಲ್ಲದಿದ್ದುರಿಂದ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಅಪಜೀ 25 ಅಪಸೇ 2008 ದಿನಾಂಕ 03/04/2008 ರಲ್ಲಿ ಸಹಾಯಕ ಸಂರಕ್ಷಣಾಧಿಕಾರಿ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : (310)225
2) ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3) ಉತ್ತರಿಸಬೇಕಾದ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಳೆದ 3 ವರ್ಷಗಳಲ್ಲಿ ತೆರವುಗೊಳಿಸಿದ ಅನಧಿಕೃತ ಕಟ್ಟಡಗಳ ಸಂಖ್ಯೆ ಎಷ್ಟು; ಅವುಗಳ ಅಂದಾಜು ಮೌಲ್ಯ ಎಷ್ಟು (ವಿವರಗಳನ್ನು ಒದಗಿಸುವುದು);

ಕಳೆದ 3 ವರ್ಷಗಳಿಂದ ತೆರವುಗೊಳಿಸಿದ ಅನಧಿಕೃತ ಕಟ್ಟಡಗಳ ಸಂಖ್ಯೆ: 923.

ಸುಮಾರು ರೂ.1030.17 ಕೋಟಿಗಳು.